ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 26-11-2020 ರಂದು ನಡೆದ ವಾರ್ಡ್ ಸಂಖ್ಯೆ: 114 ಅಗರಂ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಐ12(5)ಪಿಆರ್/35/2020-21, ದಿನಾಂಕ: 21-09-2020 ರ ಆದೇಶದಂತೆ ದಿನಾಂಕ: 26-11-2020 ರಂದು ವಾರ್ಡ್ ಸಂಖ್ಯೆ: 114 ಅಗರಂ ವಾರ್ಡ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

**ಸಭೆಗೆ ಹಾಜರಿದ್ದವರ ವಿವರಗಳು**

| ಸನ್ಮಾನ್ಯ ಶ್ರೀ. ಎನ್. ಎ. ಹ್ಯಾರೀಸ್ | | ಮಾನ್ಯ ಶಾಸಕರು, ಶಾಂತಿನಗರ ವಿಧಾನ ಸಭಾ ಕ್ಷೇತ್ರ |
|---|---|---|
| ಕ್ರ.ಸಂ | ಅಧಿಕಾರಿಗಳ ಹೆಸರು | ಪದನಾಮ |
| 1 | ಶ್ರೀ. ಅವಿನಾಶ್ ಬಾಬು | ಅಧ್ಯಕ್ಷಕರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ. ಅಪ್ಪುರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರ, ಘನತ್ಯಾಜ್ಯ ನಿರ್ವಹಣೆ ಶಾಂತಿನಗರ ವಿಭಾಗ |
| 3 | ಶ್ರೀ ಚಂದ್ರಪ್ಪ ಕೆ ಬಿ | ಸಹಾಯಕ ಕಂದಾಯ ಅಧಿಕಾರಿಗಳು, ದೊಮ್ಮಲೂರು ಉಪ ವಿಭಾಗ ಮತ್ತು ಸಮಿತಿ ಸದಸ್ಯರು |
| 4 | ಶ್ರೀ ಟಿ.ಎಸ್. ನಾಗಪ್ಪ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ |
| 5 | ಶ್ರೀ ಸುರೇಶ್ | ಕಂದಾಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 114 |
| 6 | ಶ್ರೀ ಕೆ ಎಸ್ ಚಿದಾನಂದ | ಕಿರಿಯ ಆರೋಗ್ಯ ಪರಿವೀಕ್ಷಕರು & ಸಮಿತಿ ಸದಸ್ಯರು ವಾರ್ಡ್ ಸಂಖ್ಯೆ: 114 |
| 7 | ಶ್ರೀಮತಿ. ಶೈಲಜ ಬಿ | ಸಹಾಯಕ ಕಂದಾಯ ಅಧಿಕಾರಿಗಳು (ಕಲ್ಯಾಣ) |
| 8 | ಶ್ರೀ. ಬಿ.ಸಿ. ಪ್ರಭು | ಕೆಲಸ ಪರಿವೀಕ್ಷಕರು, ವಾರ್ಡ್ ಸಂಖ್ಯೆ: 114 |
| 9 | ಶ್ರೀ. ಎಲ್. ಸಗಾಯನಾಥನ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 114 |
| 10 | ಡಾ|| ಚಿತ್ರ | ಆರೋಗ್ಯಾಧಿಕಾರಿಗಳು |
| 11 | ದೇವರಾಜ್ | ಅರಣ್ಯ ಇಲಾಖೆ, ಬಿಬಿಎಂಪಿ |
| 12 | ಶ್ರೀಮತಿ. ಶ್ರೀಮತಿ. ಎಂ.ಸಿ | ಟೈಲರಿಂಗ್ ಇನ್ಸ್‌ಟ್ರಕ್ಟರ್ ವಾರ್ಡ್ ಸಂಖ್ಯೆ: 114 |
| 13 | ಶ್ರೀ. ಶ್ರೀನಿವಾಸ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| 14 | ಶ್ರೀಮತಿ. ಮೀನಾಕ್ಷಿ | ಇನ್ಸ್‌ಪೆಕ್ಟರ್, ವಿವೇಕನಗರ ಸಂಚಾರಿ ಪೋಲೀಸ್ ಠಾಣೆ |
| 15 | ಶಿಲ್ಪ. ಎನ್ | ಸಹಾಯಕ ಅಭಿಯಂತರರು ಬೃಹತ್ ನೀರುಗಾಲುವೆ |
| 16 | ರುದ್ರಮುನಿ | ಸಹಾಯಕ ಅಭಿಯಂತರರು, ಬೆಸ್ಕಾಂ |
| 17 | ಅಜಯ್ ಎನ್ | ಸಹಾಯಕ ಅಭಿಯಂತರರು, ಬೆಸ್ಕಾಂ |
| 18 | ಕೆ ಶ್ರೀನಿವಾಸ್ | ಸಹಾಯಕ ಅಭಿಯಂತರರು, ಬೆಸ್ಕಾಂ |
| 19 | ರಾಜಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ |
| 20 | ಟಿ.ಡಿ. ಮಂಜುನಾಥ | ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ, ಬಿಬಿಎಂಪಿ |

| | | |
|---|---|---|
| 21 | ಆರ್ ಮಧು | ಕಾರ್ಯಪಾಲಕ ಅಭಿಯಂತರರು,<br>ಶಾಂತಿನಗರ ವಿಭಾಗ, ಬಿಬಿಎಂಪಿ |
| 22 | ಶ್ರೀ. ಡಿ. ಮೂರ್ತಿ | ಕಾರ್ಯದರ್ಶಿಗಳು ಮತ್ತು ಸಹಾಯಕ ಅಭಿಯಂತರರು<br>ವಾರ್ಡ್ ಸಂಖ್ಯೆ: 114 |
| **ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ** | | |
| 23 | ರಾಧ | ವಾರ್ಡ್ ಸಮಿತಿ ಸದಸ್ಯರು |
| 24 | ಭವಾನಿ | ವಾರ್ಡ್ ಸಮಿತಿ ಸದಸ್ಯರು |
| 25 | ವಸಂತ | ವಾರ್ಡ್ ಸಮಿತಿ ಸದಸ್ಯರು |
| 26 | ಪುರುಷೋತ್ತಮ | ವಾರ್ಡ್ ಸಮಿತಿ ಸದಸ್ಯರು |
| 27 | ಸರವಣ | ವಾರ್ಡ್ ಸಮಿತಿ ಸದಸ್ಯರು |
| 28 | ನಂಧ ಪಿ.ಕೆ | ವಾರ್ಡ್ ಸಮಿತಿ ಸದಸ್ಯರು |
| 29 | ರಾಜಕುಟ್ಟಿ | ವಾರ್ಡ್ ಸಮಿತಿ ಸದಸ್ಯರು |
| 30 | ಗೀತ ಶ್ರೀನಿವಾಸ್ | ವಾರ್ಡ್ ಸಮಿತಿ ಸದಸ್ಯರು<br>(ಜೀವನಕೇಂದ್ರ ಬಡಾವಣೆ ಅಸೋಸಿಯೇಷನ್) |

ದಿನಾಂಕ: 26-11-2020 ರಂದು ಮಧ್ಯಾಹ್ನ 4-00 ಗಂಟೆಗೆ ವಾರ್ಡ್ ಸಂಖ್ಯೆ: 114 ಅಗರಂ ವಾರ್ಡ್ ವ್ಯಾಪ್ತಿಯ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಂಖ್ಯೆ: 114 ಅಗರಂ ವ್ಯಾಪ್ತಿಯ ಎಂ.ಜಿ. ರಸ್ತೆಯಲ್ಲಿರುವ ನೇತಾಜಿ ಸುಭಾಷ್ ಚಂದ್ರಬೋಸ್ ಕಟ್ಟಡದಲ್ಲಿ ನಡೆಸಲಾಯಿತು.

ಸಭೆಯ ಆರಂಭದಲ್ಲಿ ನೋಡಲ್ ಅಧಿಕಾರಿಯವರನ್ನು ಹಾಗೂ ಸಭೆಗೆ ಆಗಮಿಸಿದ ಸನ್ಮಾನ್ಯ ಶ್ರೀ. ಎನ್. ಎ. ಹ್ಯಾರೀಸ್, ಮಾನ್ಯ ಶಾಸಕರು ಶಾಂತಿನರ ವಿಧಾನ ಸಭಾ ಕ್ಷೇತ್ರ ರವರನ್ನು ವಾರ್ಡ್ ಸಮಿತಿ ಸದಸ್ಯರನ್ನು ವಿವಿಧ ಇಲಾಖೆಯಿಂದ ಆಗಮಿಸಿದ್ದ ಅಧಿಕಾರಿಗಳನ್ನು ಮತ್ತು ಸಾರ್ವಜನಿಕರನ್ನು ವಾರ್ಡ್ ಸಮಿತಿಯ ಕಾರ್ಯದರ್ಶಿಯವರು ಸ್ವಾಗತವನ್ನು ಕೋರಿದರು.

ಸಭೆಯ ಪ್ರಾರಂಭದಲ್ಲಿ ಹಿಂದಿನ ಸಭೆಯ ನಡಾವಳಿಗಳನ್ನು ಓದಲಾಯಿತು. ಮತ್ತು ಸಾರ್ವಜನಿಕರ ಸಮಸ್ಯೆಗಳನ್ನು ಆದಷ್ಟು ಬಗೆಹರಿಸಿರುವ ಬಗ್ಗೆ ತಿಳಿಸಲಾಯಿತು. ಮತ್ತು ಕೆಲವೊಂದು ಸಮಸ್ಯೆಗಳ ಪರಿಹಾರ ಕಾರ್ಯವು ಪ್ರಗತಿಯಲ್ಲಿರುವುದನ್ನು ಸಾರ್ವಜನಿಕರ ಗಮನಕ್ಕೆ ತರಲಾಯಿತು.

ಇಂದು ನಡೆದ ಸಭೆಯಲ್ಲಿ ಪ್ರಮುಖವಾಗಿ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

1. ಜೀವನ್ ಕೇಂದ್ರ ಬಡಾವಣೆಯಲ್ಲಿರುವ ಬೋರ್‌ವೆಲ್‌ಗೆ ವಿದ್ಯುತ್ ಸಂಪರ್ಕ ಒದಗಿಸುವ ಬಗ್ಗೆ.
2. ಅಂಬೇಡ್ಕರ್ ಭವನದ ವಿದ್ಯುತ್ ಬಿಲ್ಲನ್ನು ಪಾವತಿಸುವ ಬಗ್ಗೆ.
3. ಗೌತಮ್‌ಪುರ ಸಮುದಾಯ ಭವನ ನವೀಕರಣಗೊಳಿಸುವ ಬಗ್ಗೆ.
4. ವಾರ್ಡ್‌ನಲ್ಲಿ ಮರಗಳ ಟ್ರಿಮ್ಮಿಂಗ್ ಮಾಡುವ ಕುರಿತು.
5. ಆರ್ಚಲಿರಿ ರಸ್ತೆ. ದೀನಬಂಧುನಗರ ಇಲ್ಲಿ ಮಳೆಯಿಂದ ನೀರು ಕೆಳ ಮಟ್ಟದಲ್ಲಿನ ಮನೆಗಳಿಗೆ ನುಗ್ಗುತ್ತಿರುವ ಬಗ್ಗೆ.
6. ಕೆ.ಬಿ.ಎ.ಆರ್. ರಸ್ತೆಯಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸುವ ಬಗ್ಗೆ.
7. ಜನ್ನಾ ಭವನದವರು ಫುಟ್‌ಪಾತ್ ಮೇಲೆ ಟ್ರಾನ್ಸ್‌ಫಾರ್ಮರ್ ಅಳವಡಿಸಿರುವ ಕುರಿತು.
8. ಕೆ.ಬಿ.ಎ.ಆರ್. ರಸ್ತೆಯ ರಾಜರಾಜೇಶ್ವರ ದೇವಸ್ಥಾನದ ಹತ್ತಿರ ನೀರು ಪೈಪುಗಳಿಂದ ಸೋರುತ್ತಿರುವ ಬಗ್ಗೆ.
9. ಬಿ.ಡಿ.ಎ. ಕಾಂಪ್ಲೆಕ್ಸ್ ವಾಟರ್ ಟ್ಯಾಂಕ್ ರಸ್ತೆಯಲ್ಲಿ ಅನಧಿಕೃತವಾಗಿ ವಾಹನಗಳನ್ನು ಪಾರ್ಕಿಂಗ್ ಮಾಡಿರುವ ಬಗ್ಗೆ.
10. ಓ.ಆರ್.ಸಿ. ರಸ್ತೆಯ ಡ್ರೈನ್ ಕ್ಲೀನ್ ಮಾಡುವ ಬಗ್ಗೆ.
11. ರುದ್ರಪ್ಪ ಗಾರ್ಡನ್‌ನಲ್ಲಿ ಹಳೆಯ ವಿದ್ಯುತ್ ಕಂಬಗಳನ್ನು ತೆರವು ಮಾಡುವ ಬಗ್ಗೆ.
12. ಮಾಯಾ ಬಜಾರ್ ಶೌಚಾಲಯ ಶುಚಿತ್ವಗೊಳಿಸುವ ಬಗ್ಗೆ.

## ವಾರ್ಡ್ ಸಮಿತಿ ಸಭೆಯ ನಡಾವಳಿಗಳು

| ಕ್ರ.ಸಂ | ಚರ್ಚಿಸಿದ ವಿಷಯಗಳು | ತೆಗೆದುಕೊಂಡ ಕ್ರಮಗಳು |
|---|---|---|
| 1 | ಶ್ರೀಮತಿ. ರಾಧ ರವರು ಮಾತನಾಡಿ ಮಳೆ ಬಂದಾಗ ಆರ್ಟಿಲರಿ ರಸ್ತೆಯಲ್ಲಿ ಹರಿಯುವ ನೀರು ಕೆಳ ಹಂತದಲ್ಲಿರುವ ದೀನಬಂಧುನಗರದಲ್ಲಿರುವ ಮನೆಗಳಿಗೆ ನುಗ್ಗುತ್ತಿದ್ದು, ಈ ಸಮಸ್ಯೆಯನ್ನು ಬಗೆಹರಿಸಲು ಕೋರಿದರು. | ಈ ಬಗ್ಗೆ ಅಭಿಯಂತರರು ಮಾತನಾಡಿ ಆರ್ಟಿಲರಿ ರಸ್ತೆ ಬದಿಯಲ್ಲಿ ನೀರು ದೀನಬಂಧುನಗರದ ಕಡೆಗೆ ಹರಿಯದಂತೆ ದಿಬ್ಬ ನಿರ್ಮಿಸಿ ಸಮಸ್ಯೆ ಬಗೆಹರಿಸುವುದಾಗಿ ಸಭೆಗೆ ತಿಳಿಸಿದರು. |
| 2 | ವಾರ್ಡ್ ವ್ಯಾಪ್ತಿಯಲ್ಲಿ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸುವಂತೆ ಸಮಿತಿ ಸದಸ್ಯರಾದ ರಾಜ್‌ಕುಟ್ಟಿ ರವರು ಕೋರಿದರು | ಈ ಬಗ್ಗೆ ಮತನಾಡಿದ ಮಾನ್ಯ ಶಾಸಕರು ವಾರ್ಡಿನಲ್ಲಿ ಅವಶ್ಯವಿರುವ ಕಡೆಗಳಲ್ಲಿ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸುವಂತೆ ಗುತ್ತಿಗೆದಾರರಿಗೆ ಮತ್ತು ಪಾಲಿಕೆಯ ಅಧಿಕಾರಿಗಳಿಗೆ ಸೂಚಿಸಿದರು. |
| 3 | ಶ್ರೀ ಮೋಹನ್ ರವರು ಮಾತನಾಡಿ ವಾರ್ಡಿನ ಗೌತಮಪುರ ಪ್ರದೇಶದಲ್ಲಿರುವ ಪಾಲಿಕೆ ಸಮುದಾಯ ಭವನವು ಹಳೆಯ ಕಟ್ಟಡವಾಗಿದ್ದು, ಇದನ್ನು ನವೀಕರಿಸುವಂತೆ ಕೋರಿದರು. | ಈ ಕುರಿತು ಮಾನ್ಯ ಶಾಸಕರು ಮಾತನಾಡಿ, ಕೂಡಲೆ ಸದರಿ ಸಮುದಾಯ ಭವನದ ನವೀಕರಣ ಕಾಮಗಾರಿಯನ್ನು ಕೈಗೊಳ್ಳುವಂತೆ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು. |
| 3 | ವಾರ್ಡ್ ಸಮಿತಿ ಸದಸ್ಯರಾದ ರಾಜ್‌ಕುಟ್ಟಿ ರವರು ಮಾತನಾಡಿ ಜಸ್ಮಾ ಭವನದವರು ಫುಟ್‌ಪಾತ್ ಮೇಲೆ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಿದ್ದು, ಇದರಿಂದಾ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿರುವುದಾಗಿ ತಿಳಿಸಿ ಕೂಡಲೇ ತೆರವುಗೊಳಿಸುವಂತೆ ಕೋರಿದರು. | ಮಾನ್ಯ ಶಾಸಕರು, ಬೆಸ್ಕಾಂ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ. ನಾಗಪ್ಪ ರವರಿಗೆ ಕೂಡಲೇ ಫುಟ್‌ಪಾತ್ ಮೇಲೆ ಅಳವಡಿಸಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ತೆರವುಗೊಳಿಸಿ, ಕಾಂಪೌಂಡ್ ಒಳಗೆ ಸ್ಥಾಪಿಸಲು ಸೂಚಿಸಿದರು. |
| 4 | ಕೆ.ಜಿ.ಎ.ಆರ್. ರಸ್ತೆಯಲ್ಲಿ ರಾಜರಾಜೇಶ್ವರಿ ದೇವಸ್ಥಾನದ ಹತ್ತಿರ ನೀರು ಸೋರಿಕೆ ಹೆಚ್ಚಾಗಿ ಆಗುತ್ತಿರುವ ವಾರ್ಡ್ ಸಮಿತಿ ಸದಸ್ಯರಾದ ಪುರುಷೋತ್ತಮ ರವರು ಸಭೆಗೆ ತಿಳಿಸಿದರು. | ನೀರು ಸೋರಿಕೆ ಆಗುತ್ತಿರುವ ಬಗ್ಗೆ ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯವರು ಕೂಡಲೇ ಕ್ರಮವಹಿಸಿ ನೀರು ವ್ಯರ್ಥವಾಗದಂತೆ ಕ್ರಮವಹಿಸಲು ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀನಿವಾಸ್ ರವರಿಗೆ ಮಾನ್ಯ ಶಾಸಕರು ಸೂಚಿಸಿದರು. |
| 5 | ವಾರ್ಡಿನ ಬಿ.ಡಿ.ಎ. ಕಾಂಪ್ಲೆಕ್ಸ್, ವಾಟರ್ ಟ್ಯಾಂಕ್ ರಸ್ತೆಯಲ್ಲಿ ಹಾಗೂ ವಾರ್ಡ್ ವ್ಯಾಪ್ತಿಯ ಹಲವಾರು ರಸ್ತೆಗಳ ಫುಟ್‌ಪಾತ್‌ಗಳಲ್ಲಿ ಹಲವಾರು ವಾಹನಗಳನ್ನು ಅನಧಿಕೃತವಾಗಿ ಪಾರ್ಕಿಂಗ್ ಮಾಡಿರುವುದನ್ನು ಕೂಡಲೇ ತೆರವುಗೊಳಿಸಲು ವಾರ್ಡ್ ಸಮಿತಿ ಸದಸ್ಯರಾದ ಶ್ರೀ. ಮಯೂರ್ ಕೋರಿದರು. | ಈ ಬಗ್ಗೆ ಕೂಡಲೇ ಕ್ರಮವಹಿಹಿಸಿ ಅನಧಿಕೃತವಾಗಿ ಪಾರ್ಕಿಂಗ್ ಮಾಡಿರುವ ವಾಹನಗಳನ್ನು ರಸ್ತೆಯಿಂದ ತೆರವುಗೊಳಿಸುವಂತೆ ಶ್ರೀಮತಿ. ಮೀನಾಕ್ಷಿ, ಸಂಚಾರ ಪೋಲೀಸರಿಗೆ ಮಾನ್ಯ ಶಾಸಕರು ಸೂಚಿಸಿದರು. |
| 6 | ವಾರ್ಡಿನಲ್ಲಿರುವ ಹಲವಾರು ಉದ್ಯಾನವನಗಳಲ್ಲಿ ಬೀದಿ ದೀಪಗಳು ಇಲ್ಲದಿರುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದ್ದು, ಕೂಡಲೇ ಬೀದಿ ದೀಪಗಳನ್ನು ಅಳವಡಿಸುವಂತೆ ಕೋರಿದರು. | ಮಾನ್ಯ ಶಾಸಕರು ಪಾಲಿಕೆಯ ತೋಟಗಾರಿಕಾ ಇಲಾಖೆಗೆ ಕೂಡಲೆ ಉದ್ಯಾನವನಗಳಲ್ಲಿ ಬೀದಿ ದೀಪಗಳನ್ನು ಅಳವಡಿಸುವಂತೆ ಸೂಚಿಸಿದರು. |
| 7 | ವಾರ್ಡಿನಲ್ಲಿ ಕಸದ ಸಮಸ್ಯೆ ಹೆಚ್ಚಾಗಿದೆ ಎಂದು ವಾರ್ಡ್ ಸಮಿತಿ ಸದಸ್ಯರಾದ ಶ್ರೀಮತಿ. ಭವಾನಿ ರವರು ಸಭೆಯಲ್ಲಿ ದೂರಿದರು. | ಈ ಕುರಿತು ಮಾತನಾಡಿದ ಶ್ರೀ ಚಿದಾನಂದ, ಕಿರಿಯ ಆರೋಗ್ಯ ಪರಿವೀಕ್ಷಕರು ದಿನನಿತ್ಯ ವಾರ್ಡಿನಲ್ಲಿ ಕಸವನ್ನು ತೆರವು ಮಾಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಕಸದ ಸಮಸ್ಯೆಯನ್ನು ಬಗೆಹರಿಸಲು ಇನ್ನೂ ಹೆಚ್ಚಿನ ಗಮನಹಿಸುವುದಾಗಿ ಸಭೆಗೆ ತಿಳಿಸಿದರು. |
| 8 | ವಾರ್ಡ್ ಸಮಿತಿ ಸದಸ್ಯರಾದ ಶ್ರೀ. ರಾಜಕುಟ್ಟಿ ರವರು ಮಾತನಾಡಿ ವಾರ್ಡಿನ ಕೆ.ಜಿ.ಎ.ಆರ್. ರಸ್ತೆ, ಸೌತ್ ರಸ್ತೆ ಮತ್ತು ಇನ್ನಿತರೆ ರಸ್ತೆಗಳಲ್ಲಿ ಡೆಬ್ರಿಸ್ ತುಂಬಿಕೊಂಡಿದ್ದು, ಇದುವರೆಗೂ ತೆರವುಗೊಳಿಸಿರುವುದಿಲ್ಲವೆಂದು ಮತ್ತು ಜಸ್ಮಾ ಭವನದಿಂದ ಪೂರ್ತಿ ಕಲ್ವರ್ಟ್ ಕೆಲಸವನ್ನು ನಿರ್ವಹಿಸಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. | ಮಾನ್ಯ ಶಾಸಕರು, ಈ ಸಮಸ್ಯೆಗಳ ಬಗ್ಗೆ ವಾರ್ಡಿನ ಸಹಾಯಕ ಇಂಜಿನಿಯರ್ ಆದ ಶ್ರೀ. ಮೂರ್ತಿ ರವರಿಗೆ ಕೂಡಲೇ ಕ್ರಮಕೈಗೊಂಡು ವರದಿ ಮಾಡಲು ಸೂಚಿಸಿದರು ಮತ್ತು ಕಾರ್ಯಪಾಲಕ ಅಭಿಯಂತರರಿಗೆ ಈ ಬಗ್ಗೆ ಮೇಲ್ವಿಚಾರಣೆ ಮಾಡಲು ಸೂಚಿಸಿದರು. |

| | | |
|---|---|---|
| 9 | ನಂದಕುಮಾರ್ ರವರು ಮಾತನಾಡಿ, ಅಗರಂ ವಾರ್ಡಿನ ಚಾನಲ್ ರಸ್ತೆಯು ಹದಗೆಟ್ಟಿರುವ ಬಗ್ಗೆ ಹಾಗೂ ಇದರಿಂದ ಸಾರ್ವಜನಿಕರುಗಳಿಗೆ ಆಗುತ್ತಿರುವ ತೊಂದರೆಯ ಬಗ್ಗೆ ಸಭೆಯಲ್ಲಿ ತಿಳಿಸಿದರು. | ಬೃಹತ್ ನೀರುಗಾಲುವೆಯಿಂದ ಹೂಳನ್ನು ತೆಗೆದು ಅದನ್ನು ರಸ್ತೆಯ ಮೇಲೆ ಹಾಕಲಾಗಿರುತ್ತದೆ. ಆದರೆ ಇದನ್ನು ಇದುವರೆಗೂ ತೆರವು ಮಾಡಿರುವುದಿಲ್ಲ, ಆದ್ದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಕೂಡಲೇ ಇದನ್ನು ತೆರವುಗೊಳಿಸಲು ಅಗತ್ಯ ಕ್ರಮವಹಿಸುವಂತೆ ಮಾನ್ಯ ಶಾಸಕರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಹಾಗೂ ಈ ರಸ್ತೆಗೆ ಕಾಂಕ್ರೀಟ್ ಹಾಕುವ ಬಗ್ಗೆ ಪ್ರಸ್ತಾವನೆ ಇದ್ದರೆ ಕೂಡಲೇ ಕ್ರಮಕೈಗೊಳ್ಳುವಂತೆ ಕಾರ್ಯಪಾಲಕ ಅಭಿಯಂತರರಿಗೆ ನಿರ್ದೇಶಿಸಿ ವರದಿ ಮಡುವಂತೆ ಸೂಚಿಸಿದರು. |
| 10 | ರಾಜಕುಟ್ಟಿರವರು ವಾರ್ಡಿನ 6ನೇ ಸ್ಕ್ವೇರ್‌ನಲ್ಲಿರುವ ಮರದ ಬೇರಿನಿಂದ ಸಾರ್ವಜನಿಕರಿಗೆ ಆಗುತ್ತಿರುವ ಬಗ್ಗೆ ತಿಳಿಸಿದರು. | ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ ರವರಿಗೆ ಸದರಿ ಬೇರನ್ನು ಜೆ.ಸಿ.ಬಿ. ಸಹಾಯದಿಂದ ಕೂಡಲೇ ತೆರವುಗೊಳಿಸಲು ಮಾನ್ಯ ಶಾಸಕರು ಸೂಚಿಸಿದರು. |
| 11 | 5 ಮತ್ತು 6ನೇ ಸ್ಕ್ವೇರ್‌ನಲ್ಲಿ ಬೀದಿ ದೀಪ ಇಲ್ಲದಿರುವ ಬಗ್ಗೆ ಶ್ರೀಮತಿ. ಭವಾನಿ ರವರು ಸಭೆಗೆ ತಿಳಿಸಿದರು. | ಪಾಲಿಕೆಯ ವಿದ್ಯುತ್ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ಶ್ರೀ.. ಶಂಕರಪ್ಪ ರವರಿಗೆ ಕೂಡಲೇ ಗುತ್ತಿಗೆದಾರರ ಮುಖಾಂತರ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು. |
| 12 | ವಾರ್ಡಿನ ರಾಜಗೋಪಾಲ್ ಮೊದಲಿಯಾರ್ ರಸ್ತೆಯಲ್ಲಿರುವ ರಸ್ತೆಗುಂಡಿಗಳ ಬಗ್ಗೆ ಶ್ರೀಮತಿ. ಭವಾನಿ ರವರು ಸಭೆಗೆ ತಿಳಿಸಿ ಇದರಿಂದ ವಾಹನ ಸವಾರರಿಗೆ ಆಗುತ್ತಿರುವ ಸಮಸ್ಯೆಯ ಬಗ್ಗೆ ತಿಳಿಸಿದರು. | ಕೂಡಲೇ ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ರಸ್ತೆಗುಂಡಿಗಳನ್ನು ಮುಚ್ಚಲು ಅಗತ್ಯ ಕ್ರಮವಹಿಸುವಂತೆ ಕಾರ್ಯಪಾಲಕ ಅಭಿಯಂತರರಾದ ಶ್ರೀ. ಮಧು ರವರಿಗೆ ಮಾನ್ಯ ಶಾಸಕರು ಸೂಚಿಸಿದರು. |
| 13 | ಪುರುಷೋತ್ತಮ ರವರು ಮಾತನಾಡಿ ವಾರ್ಡಿನಲ್ಲಿ ಬಹಳಷ್ಟು ನೀರಿನ ಸಮಸ್ಯ ಇದ್ದು ಇದರಿಂದ ವಾರ್ಡಿನ ನಿವಾಸಿಗಳು ಬಹಳ ಕಷ್ಟಪಡುವಂತಾಗಿದೆ ಎಂದು ಸಭೆಗೆ ತಿಳಿಸಿದರು. | ಈ ಕೂಡಲೇ ನೀರಿನ ಸಮಸ್ಯೆಯನ್ನು ಬಗೆಹರಿಸಲು ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಸಹಾಯಕ ಅಭಿಯಂತರರಾದ ಶ್ರೀ. ಶ್ರೀನಿವಾಸ್ ರವರಿಗೆ ಮಾನ್ಯ ಶಾಸಕರು ಸೂಚಿಸಿದರು. |
| 14 | ವಾರ್ಡ್ ವ್ಯಾಪ್ತಿಯಲ್ಲಿ ಹಲವಾರು ಮರಗಳ ಟ್ರಿಮ್ಮಿಂಗ್ ಮಾಡಬೇಕಾಗಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು. | ಈ ಬಗ್ಗೆ ಪಾಲಿಕೆಯ ಅರಣ್ಯ ವಿಭಾಗದ ಅಧಿಕಾರಿಯಾದ ಶ್ರೀ. ದೇವರಾಜ್ ರವರಿಗೆ ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಯಿತು. |
| 15 | ವಿಷ್ಣು ರವರು ಮಾತನಾಡಿ ವಾರ್ಡಿನ ಓ.ಆರ್.ಸಿ. ರಸ್ತೆಯ ಡ್ರೈನ್‌ನಲ್ಲಿ ಹೂಳು ತೆಗೆದು ನೀರು ಸರಾಗವಾಗಿ ಹರಿಯುವಂತೆ ಮಾಡಲು ಕ್ರಮವಹಿಸುವಂತೆ ಕೋರಿದರು. | ಸಹಾಯಕ ಅಭಿಯಂತರರು ಮಾತನಾಡಿ ಸದರಿ ಚರಂಡಿಯಲ್ಲಿ ಹೂಳು ತೆಗೆಯುವ ಕಾಮಗಾರಿಯು ಪ್ರಗತಿಯಲ್ಲಿದ್ದು, ಕೂಡಲೇ ಕಾಮಗಾರಿಯನ್ನು ಪೂರ್ಣಗೊಳಿಸಿ ನೀರು ಚರಂಡಿಯಲ್ಲಿ ಸರಾಗವಾಗಿ ಹರಿಯುವಂತೆ ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು. |
| 16 | ವಿಷ್ಣು ರವರು ಮಾತನಾಡಿ ವಾರ್ಡಿನ ರುದ್ರಪ್ಪ ಗಾರ್ಡನ್ ಮತ್ತು ಜಯರಾಜ್‌ನಗರ ಪ್ರದೇಶದಲ್ಲಿ ಹಲವಾರು ಹಳೆಯ ವಿದ್ಯುತ್ ಕಂಬಗಳಿದ್ದು, ಇವು ಶಿಥಿಲಗೊಂಡಿರುವುದರಿಂದ ಸಾರ್ವಜನಿಕರ ಪ್ರಾಣಹಾನಿ ಆಗುವ ಸಂಭವವಿರುತ್ತದೆ, ಆದ್ದರಿಂದ ಕೂಡಲೇ ವಿದ್ಯುತ್ ಕಂಬಗಳನ್ನು ಬದಲಾಯಿಸುವಂತೆ ಮನವಿ ಮಾಡಿದರು. | ಈ ಬಗ್ಗೆ ಮಾತನಾಡಿದ ಮಾನ್ಯ ಶಾಸಕರು ಬೆಸ್ಕಾಂ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ. ನಾಗಪ್ಪ ರವರಿಗೆ ಕೂಡಲೆ ಈ ಹಳೆಯ ವಿದ್ಯುತ್ ಕಂಬಗಳನ್ನು ಬದಲಾಯಿಸುವಂತೆ ಸೂಚಿಸಿದರು. |
| 17 | ವಿಷ್ಣು ರವರು ಮಾತನಾಡಿ ವಾರ್ಡಿನ ಮಾಯಾಬಜಾರ್ ಪ್ರದೇಶದಲ್ಲಿರುವ ಸಾರ್ವಜನಿಕ ಶೌಚಾಲಯವು ನಿರ್ವಹಣೆ ಇಲ್ಲದೇ ಬಹಳಷ್ಟು ಹದಗೆಟ್ಟಿರುತ್ತದೆ. ಇದನ್ನು ಶುಚಿಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಅನುವು ಮಾಡಿಕೊಡುವಂತೆ ಕೋರಿದರು. | ಮಾನ್ಯ ಶಾಸಕರು, ಪಾಲಿಕೆಯ ಘನತ್ಯಾಜ್ಯ ನಿರ್ವಹಣೆ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೂಡಲೇ ಸಾರ್ವಜನಿಕ ಶೌಚಾಲಯವನ್ನು ಶುಚಿಗೊಳಿಸಿ ಸಾರ್ವಜನಿಕ ಉಪಯೋಗಕ್ಕೆ ಅನುವು ಮಾಡಿಕೊಡಬೇಕೆಂದು ಸೂಚಿಸಿದರು. |

| | | |
|---|---|---|
| 18 | ವಾರ್ಡ್ ಸಮಿತಿ ಸದಸ್ಯರಾದ ಶ್ರೀ. ನಂದ ರವರು ಮಾತನಾಡಿ ವಾರ್ಡಿನಲ್ಲಿರುವ ಆಶೀರ್ವಾದ ಅಪಾರ್ಟ್‌ಮೆಂಟ್‌ನಿಂದ ಚರ್ಚ್‌ನವರೆಗೆ ಒಂದೂ ಬೀದಿ ದೀಪ ಇಲ್ಲದಿರುವುದರಿಂದ ಸಾರ್ವಜನಿಕರು ರಾತ್ರಿ ಸಮಯದಲ್ಲಿ ಸಂಚರಿಸುವುದು ಬಹಳ ಕಷ್ಟಕರವಾಗಿರುತ್ತದೆ ಎಂದು ತಿಳಿಸಿ, ಬೀದಿ ದೀಪಗಳನ್ನು ಅಳವಡಿಸಲು ಮನವಿ ಮಾಡಿದರು. | ಮಾನ್ಯ ಶಾಸಕರು ಸಭೆಯಲ್ಲಿ ಹಾಜರಿದ್ದ ವಿದ್ಯುತ್ ವಿಭಾಗದ ಸಹಾಯಕ ಅಭಿಯಂತರರಾದ ಶ್ರೀ ಮಂಜಪ್ಪ ರವರಿಗೆ ಕೂಡಲೇ ಅಪಾರ್ಟ್‌ಮೆಂಟ್‌ನಿಂದ ಚರ್ಚ್‌ನವರೆಗಿನ ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಕ್ರಮಕೈಗೊಳ್ಳುವಂತೆ ಸೂಚಿಸಿದರು. |

ಸಮಿತಿಯ ಕಾರ್ಯದರ್ಶಿಯವರು ಸಭೆಗೆ ಹಾಜರಾಗಿದ್ದ ಮಾನ್ಯ ಶಾಸಕರಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ವಂದಿಸಿದರು ಮತ್ತು ಅಧ್ಯಕ್ಷರ/ನೋಡಲ್ ಅಧಿಕಾರಿಗಳ ಅಪ್ಪಣೆಯ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ: 114 ಅಗರಂ**
**ಬಿ.ಬಿ.ಎಂ.ಪಿ**

**ನೋಡಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ: 114 ಅಗರಂ**
**ಬಿ.ಬಿ.ಎಂ.ಪಿ**

**ಪ್ರತಿಯನ್ನು:**

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮಾನ್ಯ ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
7. **ಸದರಿ ಸಭೆಯ ನಡಾವಳಿ ಪ್ರತಿಯನ್ನು ಸಭೆಗೆ ಹಾಜರಾಗಿದ್ದ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿಕೊಡುತ್ತಾ, ಸಭೆಯಲ್ಲಿ ಸಾರ್ವಜನಿಕರು ಮತ್ತು ವಾರ್ಡ್ ಸಮಿತಿ ಸದಸ್ಯರುಗಳು ಚರ್ಚಿಸಿದ ವಿಷಯದ ಬಗ್ಗೆ ಹಾಗೂ ಸಮಸ್ಯೆಗಳನ್ನು ಬಗೆಹರಿಸಲು ಕೈಗೊಂಡ ಕ್ರಮಗಳ ಸಂಪೂರ್ಣ ವಿವರವನ್ನು ಲಿಖಿತ ರೂಪದಲ್ಲಿ ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರ ಕಚೇರಿಗೆ ಸಲ್ಲಿಸಲು ಈ ಮೂಲಕ ಎಲ್ಲಾ ಇಲಾಖೆಯ ಅಧಿಕಾರಿಗಳಲ್ಲಿ ಕೋರಿದೆ.**
8. ಕಚೇರಿ ಪ್ರತಿ.